**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: ಎಡಿಎಂ2 ಶಾ.ಪ್ರಾ.ಮಿಂ.ಸಂ-01/2018-19 ದಿನಾಂಕ: 22-05-2018

**ಸುತ್ತೋಲೆ**

ವಿಷಯ:-2018-19ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಮತ್ತು ಮಿಂಚಿನ ಸಂಚಾರ ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ.

******

2018-19ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಿದ್ದು, ಅದಕ್ಕೆ ಪೂರ್ವಭಾವಿಯಾಗಿ ಸಿದ್ಧತಾ ಕಾರ್ಯ ಚಟುವಟಿಕೆಗಳನ್ನು ಕೆಳಕಂಡಂತೆ ಆಯೋಜಿಸಲು ಸೂಚಿಸಲಾಗಿದೆ.

1) **ಶಾಲೆ ಪ್ರಾರಂಭ ಮತ್ತು ಪ್ರಾರಂಭೋತ್ಸವ ದಿನಾಂಕ:-28-05-2018ರಂದು ಶಾಲೆಯನ್ನು ಪ್ರಾರಂಭಿಸಬೇಕು.**

ಶಾಲೆಯ ಆವರಣ, ಶಾಲಾ ಕೊಠಡಿಗಳನ್ನು ಸ್ವಚ್ಛಗೊಳಿಸುವುದು, ಕುಡಿಯುವ ನೀರು ಮತ್ತು ಶೌಚಾಲಯಗಳು ಸುಸ್ಥಿತಿಯಲ್ಲಿರುವಂತೆ ವ್ಯವಸ್ಥೆಗೊಳಿಸುವುದು. ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸುವುದು. ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಸಿಹಿ ಹಂಚುವ ವ್ಯವಸ್ಥೆಯನ್ನು ಮಾಡುವುದು. ಶಾಲಾ ಪ್ರಾರಂಭೋತ್ಸವವನ್ನು ಸಾರ್ವಜನಿಕರ ಮತ್ತು ಪೋಷಕರ ಉಪಸ್ಥಿತಿಯಲ್ಲಿ ನೆರವೇರಿಸುವುದು.

ನೂತನವಾಗಿ ದಾಖಲಾಗುವ ವಿದ್ಯಾರ್ಥಿಗಳಿಗೆ ಶಾಲಾ ಪ್ರಾರಂಭದ ದಿನ ಅಹ್ಲಾದಕರ ಸಂದರ್ಭ ಆಗಿರುವಂತೆ ಅಧ್ಯಾಪಕರು, ಅವರನ್ನು ನಡೆಸಿಕೊಳ್ಳಬೇಕು. ಈ ಸಂಗತಿ ಶಾಲಾ ಅವಧಿಯ ಬೇರೆಲ್ಲಾ ದಿನಗಳಲ್ಲೂ ಪ್ರಸ್ತುತವಾದರೂ ವಿದ್ಯಾರ್ಥಿ ಶಾಲೆಗೆ ಬಂದ ದಿನ ವಿಶೇಷವಾಗಿ ಅವನಿಗೆ/ಅವಳಿಗೆ ಅಪ್ಯಾಯಮಾನವಾದ ದಿನವಾಗಿರುವಂತೆ ನೋಡಿಕೊಳ್ಳಬೇಕು. ಪ್ರಾರಂಭಿಕ ದಿನದಿಂದಲೇ ಕಲಿಕಾ ಪೂರಕ ಚಟುವಟಿಕೆಗಳನ್ನು ಕೈಗೊಳ್ಳುವುದು ಇದರಿಂದ ವಿದ್ಯಾರ್ಥಿ ತನ್ನ ವ್ಯಾಸಂಗ ಅವಧಿಯಲ್ಲಿ ಲವಲವಿಕೆಯಿಂದ ಕಳೆಯಲು ಪ್ರೇರಣೆ ನೀಡಿದಂತೆ ಆಗುತ್ತದೆ. ಸ್ಥಳೀಯ ಸುದ್ದಿ ಮಾಧ್ಯಮದಲ್ಲಿ ವ್ಯಾಪಕ ಪ್ರಚಾರ ನೀಡುವುದು.

2) **ಮಿಂಚಿನ ಸಂಚಾರ :**

ಮಿಂಚಿನ ಸಂಚಾರದ ಪ್ರಧಾನ ಆಶಯ ಎಲ್ಲಾ ಶಾಲೆಗಳು ತೆರೆಯಲ್ಪಟ್ಟಿವೆಯೇ ಮತ್ತು ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಿದೆಯೇ ಎಂಬುದನ್ನು ಮೇಲ್ವಿಚಾರಕರು ಖಚಿತಪಡಿಸಿಕೊಳ್ಳುವ ಕಾರ್ಯಕ್ರಮವಾಗಿದೆ. ಇದೊಂದು ಕ್ಷಿಪ್ರ ಭೇಟಿ. ಇದರ ಸ್ವರೂಪವನ್ನು ಮುಂದೆ ವಿವರಿಸಿದೆ.

- ✓ ದಿನಾಂಕ:01.06.2018 ರಿಂದ 08.06.2018ರವರೆಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
- ✓ ಇದಕ್ಕಾಗಿ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರಿಬ್ಬರೂ ಜಿಲ್ಲಾ ಹಂತದಲ್ಲಿ ತಮ್ಮ ಎರಡೂ ಕಛೇರಿಗಳಲ್ಲಿರುವ ಮೇಲ್ವಿಚಾರಕ / ಅಧಿಕಾರಿಗಳನ್ನು ಗಮನದಲ್ಲಿಟ್ಟುಕೊಂಡು ಅಕ್ಷರ ದಾಸೋಹ ಅಧಿಕಾರಿಗಳನ್ನೊಳಗೊಂಡಂತೆ ಯಾವ ಯಾವ ಸ್ಥಳಗಳಿಗೆ ಯಾವ ಅಧಿಕಾರಿಗಳು ಹೋಗಬೇಕೆಂದು ಯೋಜನೆ ತಯಾರಿಸುವುದು ಹಾಗೂ ಅದರಂತೆ ಕಾರ್ಯೋನ್ಮುಖರಾಗುವುದು.
- ✓ ಇದೇ ರೀತಿ ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯವರು ತಮ್ಮ ವ್ಯಾಪ್ತಿಯಲ್ಲಿರುವ ಮೇಲ್ವಿಚಾರಕ / ಅಧಿಕಾರಿಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ತಯಾರಿಸಿ ಸೂಚನೆಯನ್ನು ನೀಡುವುದು.
- ✓ ಬೆಳಗಿನ ಅವಧಿಯಲ್ಲಿ ಶಾಲೆಗೆ ಹಾಜರಾಗದ ಮಕ್ಕಳನ್ನು ಕರೆತರಲು ಬ್ಯಾಂಡ್‌ಸೆಟ್ ಅಥವಾ ವಿಶಿಷ್ಟ ಶೈಲಿಯಲ್ಲಿ ಬರಮಾಡಿಕೊಳ್ಳಲು ಜಾಥಾ ವ್ಯವಸ್ಥೆ ಮಾಡುವುದು.

- ✓ ಅಗತ್ಯವೆನಿಸಿದಲ್ಲಿ ಎರಡು ಹಂತದಲ್ಲಿ ಸಭೆಯನ್ನು ನಡೆಸಿ ಕಾರ್ಯಕ್ರಮದ ವಿನ್ಯಾಸವನ್ನು ರಚಿಸಿಕೊಳ್ಳುವುದು.
- ✓ ಹೀಗೆ ನಿಯೋಜಿಸಲ್ಪಟ್ಟ ಮೇಲ್ವಿಚಾರಕ / ಅಧಿಕಾರಿಯು ಸಂಬಂಧಿಸಿದ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿ ಹಿಮ್ಮಾಹಿತಿಯನ್ನು ಲಿಖಿತವಾಗಿ ಮುಖ್ಯಶಿಕ್ಷಕರಿಗೆ ನೀಡುವುದು. ಈ ಭೇಟಿಯ ಅವಧಿ ಒಂದು ಶಾಲೆಗೆ ಸುಮಾರು 30 ರಿಂದ 40 ನಿಮಿಷ ಇರಬಹುದು.
- ✓ ಅವಲೋಕಿಸಬೇಕಾದ ಅಂಶಗಳೆಂದರೆ ಶಾಲಾ ಕೊಠಡಿಗಳು ಶಾಲೆಯ ಆವರಣ, ಸ್ವಚ್ಛವಾಗಿದೆಯೇ? ಶೌಚಾಲಯ ಮತ್ತು ಕುಡಿಯುವ ನೀರು ವ್ಯವಸ್ಥೆಗೊಳಿಸಲಾಗಿದೆಯೇ? ಮಧ್ಯಾಹ್ನದ ಉಪಾಹಾರ ವ್ಯವಸ್ಥೆಗೊಳಿಸಿದ್ದಾರೆಯೇ? ಪಠ್ಯಪುಸ್ತಕ, ಸಮವಸ್ತ್ರ ಇವುಗಳನ್ನು ಹಂಚಲ್ಪಟ್ಟಿವೆಯೇ, ವಿದ್ಯಾರ್ಥಿಗಳ ದಾಖಲಾತಿ ಹಾಗೂ ಹಾಜರಾತಿಯೂ ಸಮರ್ಪಕವಿದೆಯೇ? ಸೇತುಬಂಧ ಕಾರ್ಯಕ್ರಮ ನಡೆಯುತ್ತಿದೆಯೇ? ವೇಳಾಪಟ್ಟಿ ಸಿದ್ಧತೆ, ಪಾಠಹಂಚಿಕೆ, ಬೋಧನಾ ಸಿದ್ಧತೆಗಳಿಗೆ ಅಗತ್ಯ ಕ್ರಮವಹಿಸಲಾಗಿದೆಯೇ? ಎಂಬ ಅಂಶಗಳನ್ನು ಅವಲೋಕಿಸಿ ಸೂಕ್ತ ಹಿಮ್ಮಾಹಿತಿಯನ್ನು ಅಧ್ಯಾಪಕರಿಗೆ ನೀಡಬೇಕು.
- ✓ ಈ ಕಾರ್ಯವು ಮುಗಿದ ಬಳಿಕ ಕ್ರೋಢೀಕೃತ ವರದಿಯನ್ನು ಉಪನಿರ್ದೇಶಕರು (ಆಡಳಿತ) ರವರು ದಿನಾಂಕ 10.06.2018ರ ಒಳಗೆ ಆಯಾ ಆಯುಕ್ತಾಲಯದ ಅಪರ ಆಯುಕ್ತರಿಗೆ ಮತ್ತು ಬೆಂಗಳೂರು ಮತ್ತು ಮೈಸೂರು ವಿಭಾಗದವರು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ತಲುಪುವಂತೆ ವರದಿ ಕಳುಹಿಸಬೇಕು.

(ಡಾ॥ ಎಂ.ಟಿ.ರೇಜು ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ,**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ/ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲು ತಿಳಿಸಿದೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲು ತಿಳಿಸಿದೆ.

**ಪ್ರತಿಗಳು:-**

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ಇವರ ಮಾಹಿತಿಗಾಗಿ.
3. ನಿರ್ದೇಶಕರು (ಪ್ರಾಥಮಿಕ) ಪ್ರೌಢ / ಡಿ.ಎಸ್.ಇ.ಆರ್.ಟಿ / ಕೆ.ಎಸ್.ಇ.ಇ.ಬಿ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು / ಇತರೆ ಪರೀಕ್ಷೆಗಳು / ಸರ್ವ ಶಿಕ್ಷಣ ಅಭಿಯಾನ / ಆರ್.ಎಂ.ಎಸ್.ಎ / ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯದ ನಿರ್ದೇಶಕರುಗಳಿಗೆ ಮಾಹಿತಿಗಾಗಿ.
4. ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು ವಿಭಾಗ, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ.
5. ಪ್ರಾಂಶುಪಾಲರು, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ, ಮೈಸೂರು, ಜಮಖಂಡಿ, ಮಂಗಳೂರು, ಗುಲ್ಬರ್ಗಾ, ಬೆಳಗಾಂ ಇವರಿಗೆ ಮಾಹಿತಿಗಾಗಿ.

# 2018–19ನೇ ಸಾಲಿನ ಮಿಂಚಿನ ಸಂಚಾರದ ಚೆಕ್ ಲಿಸ್ಟ್

## ನಮೂನೆ

ಭೇಟಿ ನೀಡಿದ ಅಧಿಕಾರಿಯ ಹೆಸರು ಮತ್ತು ಪದನಾಮ:

ಭೇಟಿಯ ದಿನಾಂಕ: ಸಮಯ:

| ಕ್ರ ಸಂ | ವಿವರ | ಹೌದು/ ಇಲ್ಲ | ಷರಾ |
|---|---|---|---|
| 1 | 2018–19ನೇ ಸಾಲಿನ ದಾಖಲಾತಿ ಪ್ರಾರಂಭ ಮಾಡಲಾಗಿದೆಯೇ? | | |
| 2 | ಎಸ್.ಡಿ.ಎಂ.ಸಿ ಸಭೆ/ಶಿಕ್ಷಕರ ಸಭೆಗಳು ನಡೆಸಲಾಗಿದೆಯೇ ? | | |
| 3 | ಸೇತುಬಂಧ ಕಾರ್ಯಕ್ರಮ ನಡೆಸಲಾಗುತ್ತಿದೆಯೇ ? | | |
| 4 | ಶಿಕ್ಷಕರ ವೇಳಾಪಟ್ಟಿ /ಶಿಕ್ಷಕರಿಗೆ ಪಾಠಹಂಚಿಕೆ ಮಾಡಲಾಗಿದೆಯೇ? | | |
| 5 | ಕ್ರಿಯಾಯೋಜನೆ ಸಿದ್ದಪಡಿಸಲಾಗಿದೆಯೇ ? | | |
| 6 | ಶಾಲಾ ಪಂಚಾಂಗ ಸಿದ್ದಪಡಿಸಲಾಗಿದೆಯೇ ? | | |
| 7 | ಶಾಲಾ ಶೈಕ್ಷಣಿಕ ಯೋಜನೆ ಸಿದ್ದಪಡಿಸಲಾಗಿದೆಯೇ ? | | |
| 8 | ವಿವಿಧ ಕ್ಲಬ್‌ಗಳ ರಚನೆ ಮಾಡಲಾಗಿದೆಯೇ? | | |
| 9 | ಶಾಲಾಭಿವೃದ್ಧಿ ಯೋಜನೆ ಸಿದ್ದಪಡಿಸಲಾಗಿದೆಯೇ ? | | |
| 10 | ಶಾಲಾ ಧ್ಯೇಯ ವಾಕ್ಯ ಮಾಡಲಾಗಿದೆಯೇ ? | | |
| 11 | ಶಾಲಾ ಆವರಣ, ತರಗತಿ ಕೋಣೆ ಹಾಗೂ ಆಟದ ಮೈದಾನ ಸ್ವಚ್ಛತೆಯಿಂದ ಕೂಡಿದೆಯೇ? | | |
| 12 | ಶೌಚಾಲಯ ಸ್ವಚ್ಛತೆಯಿಂದ ಕೂಡಿದೆಯೇ ? | | |
| 13 | ತರಗತಿ ವೇಳಾಪಟ್ಟಿ ತಯಾರಿಸಿದ್ದಾರೆಯೇ ? | | |
| 14 | ಬೋಧನಾ ಕೊಠಡಿಗಳು ಸುಸ್ಥಿತಿಯಲ್ಲಿವೆಯೇ? | | |
| 15 | ಎಲ್ಲಾ ವಿದ್ಯಾರ್ಥಿಗಳಿಗೂ ಆಸನ ವ್ಯವಸ್ಥೆ ಕಲ್ಪಿಸಲಾಗಿದೆಯೇ? | | |
| 16 | ಅಡುಗೆ ಕೋಣೆ ಸ್ವಚ್ಛವಾಗಿದ್ದು, ಸುಸ್ಥಿತಿಯಲ್ಲಿರುವ ಅಗ್ನಿನಂದಕ ಅಳವಡಿಸಲಾಗಿದೆಯೇ? | | |
| 17 | ಸಾಮಾನ್ಯ ವೇಳಾಪಟ್ಟಿ ತಯಾರಿಸಿದ್ದಾರೆಯೇ ? | | |
| 18 | ಅಕ್ಷರ ದಾಸೋಹ ಕಾರ್ಯಕ್ರಮದ ದಾಸ್ತಾನು ನಿರ್ವಹಣೆ ಮಾಡಲಾಗಿದೆಯೇ ? | | |
| 19 | ಸಮವಸ್ತ್ರ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗಿದೆಯೇ ? | | |
| 20 | ಪಠ್ಯ ಪುಸ್ತಕ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗಿದೆಯೇ ? | | |
| 21 | ನಲಿಕಲಿ ತರಗತಿ ಕಾರ್ಡುಗಳು, ಪ್ರಗತಿ ನೋಟ, ಹವಾಮಾನ ನಕ್ಷೆಯೊಂದಿಗೆ ಸಿದ್ಧತೆ ಮಾಡಲಾಗಿದೆಯೇ? | | |
| 22 | 10 ಅಂಶಗಳ ಕಾರ್ಯಕ್ರಮ ಜಾರಿಗೆ ತರಲಾಗಿದೆಯೇ ? | | |
| 23 | ಮಾದಕ ವಸ್ತುಗಳ ಮಾರಾಟ ನಿಷೇಧ ಸೂಚನಾ ಫಲಕ ಅಳವಡಿಸಲಾಗಿದೆಯೇ ? | | |
| 24 | ಶಾಲೆಯಿಂದ ಹೊರಗಿರುವ ಮಕ್ಕಳ ಸಂಖ್ಯೆ | | |
| 25 | ಸತತ 7 ದಿನ ಗೈರು ಹಾಜರಾಗಿರುವ ಮಕ್ಕಳ ಸಂಖ್ಯೆ | | |
| 26 | ಭೇಟಿ ನೀಡಿದಂದು ಶಾಲೆಯಲ್ಲಿ ಹಾಜರಿದ್ದ ಒಟ್ಟು ಮಕ್ಕಳ ಸಂಖ್ಯೆ | | |
| 27 | ಭೇಟಿ ನೀಡಿದಂದು ಗೈರು ಹಾಜರಾಗಿರುವ ಶಿಕ್ಷಕರ ಸಂಖ್ಯೆ | | |
| 28 | ಭೇಟಿ ನೀಡಿದಂದು ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರ ಸಂಖ್ಯೆ | | |
| 29 | ಬಿಸಿಯೂಟ ಶಾಲೆಯಲ್ಲಿಯೇ ತಯಾರಿಸಿ ಮಕ್ಕಳಿಗೆ ನೀಡಲಾಗುತ್ತಿದೆಯೇ ? | | |
| 30 | ಕ್ಷೀರ ಭಾಗ್ಯ ಯೋಜನೆ ಸಮರ್ಪಕವಾಗಿದೆಯೇ ? | | |
| 31 | ರೇಡಿಯೋ ಸುಸ್ಥಿತಿಯಲ್ಲಿ ಇದೆಯೇ ? | | |
| 32 | ದಾಖಲಾತಿಯನ್ನು SATS ನಲ್ಲಿ ಅಳವಡಿಸಿದೆಯೇ? | | |
| 33 | ಇತರೆ | | |

ಭೇಟಿ ನೀಡಿದವರ ಸ್ಪಷ್ಟ ಅಭಿಪ್ರಾಯ:

ಮುಖ್ಯ ಶಿಕ್ಷಕರ ಸಹಿ ಭೇಟಿ ನೀಡಿದ ಅಧಿಕಾರಿಗಳ ಸಹಿ



Scanned by CamScanner